ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1275 (1231)
ಸದಸ್ಯರ ಹೆಸರು:	ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ಸಚಿವರು	ಮಾನ್ಯ ಕಂದಾಯ ಸಚಿವರು
ಉತ್ತರಿಸಬೇಕಾದ ದಿನಾಂಕ:	17-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಲೋಕಸೇವಾ ಆಯೋಗವು 2015 ಸಾಲಿನ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ನಡೆಸಲಾದ ಪರೀಕ್ಷೆಯಲ್ಲಿ ಎಷ್ಟು ತಹಶೀಲ್ದಾರ್ (ಗ್ರೇಡ್-2) (ಮೂಲವೃಂದ) ಹುದ್ದೆಗಳಿಗೆ ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ :	ಕರ್ನಾಟಕ ಲೋಕ ಸೇವಾ ಆಯೋಗವು 2015ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ನಡೆಸಲಾದ ಪರೀಕ್ಷೆಯಲ್ಲಿ 66 ತಹಶೀಲ್ದಾರ್ ಗ್ರೇಡ್-2 ಹುದ್ದೆಗಳಿಗೆ ಆಯ್ಕೆ ಮಾಡಿ ಕಳುಹಿಸಲಾಗಿದೆ.
ಆ)	ಈ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡುವ ಮುನ್ನ ದಾಖಲಾತಿಗಳ ಪರಿಶೀಲನೆಗಾಗಿ ದಾಖಲಾತಿಗಳನ್ನು ಒದಗಿಸಲು ತಿಳಿಸಿದ ನಂತರವೂ, ದಾಖಲಾತಿಗಳನ್ನು ಒದಗಿಸದೇ ಗೈರು ಹಾಜರಾದ ಅಥವಾ ಹುದ್ದೆಗೆ ಹಾಜರಾಗುವುದಿಲ್ಲವೆಂದು ಲಿಖಿತ ಮೂಲಕ ತಿಳಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು:	ಶ್ರೀನಿವಾಸ್ ಕೆ.ಆರ್. ಇವರು ಈಗಾಗಲೇ 2014ನೇ ಸಾಲಿನಲ್ಲಿ ತಹಶೀಲ್ದಾರ್ ಗ್ರೇಡ್-2 ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ ದಾಖಲೆಗಳ ಪರಿಶೀಲನೆಗೆ ಹಾಜರಾಗಿರುವುದಿಲ್ಲ.
ಇ)	ಅಂತಹ ಅಭ್ಯರ್ಥಿಗಳ ಹೆಸರು ಮತ್ತು ಅವರು ಆಯ್ಕೆಯಾಗಿರುವ ಮೀಸಲಾತಿಯ ಪ್ರವರ್ಗಗಳ ವಿವರಗಳನ್ನು ನೀಡುವುದು:	ಶ್ರೀ ಶ್ರೀನಿವಾಸ್ ಕೆ.ಆರ್. ಸಾಮಾನ್ಯ /3ಎ/ಗ್ರಾಮೀಣ /(GM/3A/RL)
ಈ)	ಆಯ್ಕೆ ಮಾಡಿ ಸರ್ಕಾರಕ್ಕೆ ಕಳುಹಿಸಲಾದ ಈ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡಿದ ನಂತರವೂ, ಈವರೆವಗೂ ಕರ್ತವ್ಯಕ್ಕೆ ಎಷ್ಟು ಅಭ್ಯರ್ಥಿಗಳು ವರದಿ ಮಾಡಿಕೊಂಡಿರುವುದಿಲ್ಲ? (ಅಂತಹ ಅಭ್ಯರ್ಥಿಗಳ ಹೆಸರು ಮತ್ತು ಅವರು ಆಯ್ಕೆಯಾಗಿರುವ ಮೀಸಲಾತಿ ಪ್ರವರ್ಗಗಳ ವಿವರಗಳನ್ನು ನೀಡುವುದು)	ಒಟ್ಟು 66 ತಹಶೀಲ್ದಾರರುಗಳಲ್ಲಿ ಶ್ರೀ ಶ್ರೀನಿವಾಸ್ ಕೆ.ಆರ್. ಇವರನ್ನು ಹೊರತು ಪಡಿಸಿ ಉಳಿದ ಎಲ್ಲಾ ಅಭ್ಯರ್ಥಿಗಳು (65) ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಸಂಖ್ಯೆ: ಕಂಇ 22 ಎಎಸ್‌ಡಿ 2021

(ಆರ್. ಅಶೋಕ)
ಕಂದಾಯ ಸಚಿವರು.